ಇದರರ್ಥ, ಆಧ್ಯಾತ್ಮಿಕ ತತ್ತ್ವ-ವಿಚಾರಗಳಿಲ್ಲದ ಪ್ರಾಪಂಚಿಕ ಬದುಕಿಗೆ ಸ್ವಾಮೀಜಿ ಒತ್ತು ನೀಡಿದ್ದರು ಎಂದಲ್ಲ. ಭಾರತೀಯ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಆಧ್ಯಾತ್ಮಿಕತೆಯನ್ನು ಅವರು ಎಲ್ಲೆಡೆ ಎತ್ತಿ ಹಿಡಿದರು. ತಮ್ಮ ಪರಿವ್ರಾಜಕ ಜೀವನದ ಅವಧಿಯಲ್ಲಿ ಭಾರತದಾದ್ಯಂತ ಸಂಚರಿಸಿದ ಅವರು, ಇಲ್ಲಿನ ಜನಸಾಮಾನ್ಯರ ನೋವು-ನಲಿವುಗಳನ್ನೂ, ಬಡತನ-ಸಿರಿತನಗಳನ್ನೂ, ಧರ್ಮಕೇಂದ್ರಿತ ಸಾಮಾಜಿಕ ರೀತಿನೀತಿಗಳನ್ನೂ ನಿಕಟವಾಗಿ ಕಂಡರು. ಲೌಕಿಕ ಜೀವನದ ಸಮಸ್ಯೆಗಳು ಎಂಥವೇ ಆಗಿರಲಿ, ಭಾರತೀಯನೊಬ್ಬ ಪ್ರತಿಯೊಂದನ್ನೂ ಧರ್ಮಕ್ಕಾಗಿ ತ್ಯಜಿಸುವನು, ಆಧ್ಯಾತ್ಮಿಕತೆಗೆ ಎಲ್ಲಕ್ಕಿಂತ ಹೆಚ್ಚಿನ ಮೌಲ್ಯವನ್ನು ನೀಡುವನು ಎಂಬ ಅಂಶವನ್ನು ಸ್ವಾಮೀಜಿ ಪಾಶ್ಚಾತ್ಯ ಹಾಗೂ ಪೌರ್ವಾತ್ಯ ದೇಶಗಳಲ್ಲಿ ತಿಳಿಯಪಡಿಸಿದರು. ಪೌರ್ವಾತ್ಯ ದೇಶಗಳ ಆಧ್ಯಾತ್ಮಿಕತೆಯನ್ನು ಪಶ್ಚಿಮ ದೇಶಗಳಲ್ಲಿ ಹರಡುವುದು, ಅದೇರೀತಿ ಪಾಶ್ಚಾತ್ಯ ದೇಶಗಳು ವೈಜ್ಞಾನಿಕ-ಭೌತಿಕ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿಯನ್ನು ಪೌರ್ವಾತ್ಯ ದೇಶಗಳಲ್ಲಿ ಪಸರಿಸುವುದು - ಇದು ಸ್ವಾಮೀಜಿ ಬಯಸಿದ ಸಮನ್ವಯದ ಆಧುನಿಕ ಪ್ರಪಂಚ. ಹಳೆಯ-ಹೊಸ ಆದರ್ಶಗಳಿಗೂ, ಪೂರ್ವ-ಪಶ್ಚಿಮ ದೇಶಗಳ ದೃಷ್ಟಿಕೋನಗಳಿಗೂ ಇರುವ ವ್ಯತ್ಯಾಸವನ್ನರಿತು, ಅವೆರಡನ್ನೂ ಪರಸ್ಪರ ವಿನಿಮಯ ಮಾಡಿಕೊಂಡು, ಲೌಕಿಕ-ಆಧ್ಯಾತ್ಮಿಕ ಎರಡೂ ಕ್ಷೇತ್ರಗಳಲ್ಲಿ ಮುನ್ನಡೆಯುವುದು - ಇದೇ ಭವಿಷ್ಯದ ಜಾಗತಿಕ ಧರ್ಮವಾಗಬೇಕು ಎನ್ನುತ್ತಾರೆ ಸ್ವಾಮೀಜಿ. ಸಮಗ್ರ ಜಗತ್ತನ್ನು ಒಂದಾಗಿ ಕಾಣುವ, ಅಷ್ಟೇ ಅಲ್ಲದೆ ಲೌಕಿಕ-ಅಲೌಕಿಕ ಬದುಕನ್ನು ಒಂದಾಗಿ ಬೆಸೆಯುವ ಸ್ವಾಮೀಜಿಯವರ ಆದರ್ಶ ನಿಜವಾದ ಅರ್ಥದಲ್ಲಿ 'ಸರ್ವಸಮನ್ವಯ ಭಾವ'ದಿಂದ ಕೂಡಿದೆ; 'ಸಮದರ್ಶನ'ದ ವಿಶಾಲ ದೃಷ್ಟಿಯಾಗಿ ಕಂಡುಬರುತ್ತದೆ.

ಯಾರು ಇಹಲೋಕದ ಬಂಧನದಿಂದ ಪಾರುಮಾಡಿ, ಪರಮಾತ್ಮನ ದರ್ಶನ ಮಾಡಿಸುವನೋ ಅವನೇ ಗುರು; ಅವನೇ ಅಜ್ಞಾನದಲ್ಲಿ ತೊಳಲಾಡುತ್ತಿರುವ ಜೀವಿಯ ಪಾಲಿಗೆ ಇಹ-ಪರಗಳ ನಡುವಿನ ಸೇತುವೆ; ಸುರಕ್ಷಿತವಾಗಿ ಭವಸಾಗರವನ್ನು ದಾಟಿಸುವ ಭಗವಂತ. ಸ್ವಾಮಿ ವಿವೇಕಾನಂದರ ವೈವಿಧ್ಯಮಯ ವಿಚಾರಗಳು ಪ್ರಪಂಚದ ವಿವಿಧ ನೆಲೆಗಳಲ್ಲಿ, ವಿವಿಧ ಹಂತಗಳಲ್ಲಿ ವ್ಯಕ್ತಿಯನ್ನು ಆಧ್ಯಾತ್ಮಿಕ ನೆಲೆಗೇರಿಸುತ್ತವೆ. ಪ್ರಪಂಚಕ್ಕೆ ದಿವ್ಯತೆಯ ಅರಿವನ್ನು ನೀಡುತ್ತ ಹೋದರು ಸ್ವಾಮೀಜಿ. ಶ್ರೀರಾಮಕೃಷ್ಣರು ಸಾಕಷ್ಟು ಮೊದಲೇ 'ನರೇನ್ ಪ್ರಪಂಚಕ್ಕೆ ಅರಿವು ನೀಡುತ್ತಾನೆ' ಎಂದು ಭವಿಷ್ಯವಾಣಿ ನುಡಿದಿದ್ದರು. ಈ ಮಾತು ಸತ್ಯವಾಯಿತು; ಸ್ವಾಮೀಜಿ ಲೌಕಿಕ-ಅಲೌಕಿಕ ಜಗತ್ತುಗಳ ನಡುವಿನ ಸೇತುವೆಯಾದರು.

### ಜನನೀ ಜನ್ಮಭೂಮಿಶ್ಚ...

ಸ್ವಾಮೀಜಿ ದೃಷ್ಟಿ ಎಷ್ಟೇ ವ್ಯಾಪಕಗೊಳ್ಳಲಿ, ವಿಶ್ವವಿಶಾಲವಾಗಿರಲಿ ಅವರೆಂದೂ ಭಾರತವನ್ನು ಮರೆಯಲಿಲ್ಲ. ತಮ್ಮ ನಾಡು, ನುಡಿ, ಸಂಸ್ಕೃತಿಗಳು ಅವರಿಗೆ ಪರಮ ಪವಿತ್ರವಾಗಿತ್ತು. ಅವರು ಪಾಶ್ಚಾತ್ಯ ದೇಶಗಳಲ್ಲಿ ತಮ್ಮ ದಿಗ್ವಿಜಯದ ನಂತರ ಭಾರತಕ್ಕೆ ಮರಳಿದ ಸಂದರ್ಭ ಅತ್ಯಂತ ಹೃದಯಸ್ಪರ್ಶಿಯಾಗಿದೆ. ತಮ್ಮ ಪರಿವ್ರಾಜಕ ದಿನಗಲ್ಲೂ, ಮುಂದೆ ಅಮೆರಿಕಾ-ಇಂಗ್ಲೆಂಡ್ ದೇಶಗಳಲ್ಲಿ ಸ್ವಾಮೀಜಿ ಕೈಗೊಂಡ ಹಿಂದೂಧರ್ಮದ ಪ್ರಚಾರ ಕಾರ್ಯದ ನಡುವೆಯೂ, ಹಲವು ಬಗೆಯ ಸಂಕಟ, ಸುಖ-ವೈಭವದ ನಡುವೆಯೂ ಅವರು ತಮ್ಮ ಮಾತೃಭೂಮಿಯ ಉದ್ಧಾರ ಹೇಗೆ ಸಾಧ್ಯವಾದೀತು ಎಂದೇ ಚಿಂತಿಸುತ್ತಿದ್ದರು. ಪರಮತಸಹಿಷ್ಣುತೆ, ಅನ್ಯಭಾವನೆಗಳ ಸ್ವೀಕಾರ, ವಿಶ್ವವ್ಯಾಪಕವಾದ ಉದಾರಭಾವ - ಇವನ್ನೆಲ್ಲ ಸ್ವಾಮೀಜಿ ಬೋಧಿಸುತ್ತಿದ್ದರು; ಆದರೆ ಎಂದಿಗೂ ತಮ್ಮ ಧರ್ಮ, ದೇಶ, ನಾಡು, ನುಡಿಗಳನ್ನಾಗಲಿ ತಮ್ಮ ಸ್ವಾಭಿಮಾನವನ್ನಾಗಲಿ ಬಲಿಗೊಟ್ಟು ವಿಶ್ವವ್ಯಾಪಕತೆಯನ್ನು ಬೋಧಿಸುವ ಅಪ್ರಾಮಾಣಿಕ ಪ್ರವೃತ್ತಿ ಅವರದಾಗಿರಲಿಲ್ಲ. ತನ್ನ ನೆಲದಲ್ಲಿ, ತನ್ನ ನೆಲೆಯಲ್ಲಿ, ನಿಂತು ಜಗತ್ತನ್ನೆಲ್ಲ ವ್ಯಾಪಿಸುವ ಅಪ್ಪಟ ದೇಶಭಕ್ತನ ಪ್ರವೃತ್ತಿ ಅವರದು. ಪಾಶ್ಚಾತ್ಯ ಜನಜೀವನ, ಸಮಾಜದ ಅನೇಕ ಸುಧಾರಣೆಗಳನ್ನು ಅವರು ಮೆಚ್ಚಿಕೊಂಡಿದ್ದರೂ, ಅಲ್ಲಿನ ಜನ ಎಂದಾದರೂ ಭಾರತೀಯರನ್ನಾಗಲಿ, ಅವರ ಧರ್ಮ ಸಂಸ್ಕೃತಿ, ಸಮಾಜವನ್ನಾಗಲಿ ಟೀಕಿಸಿದರೆ ಸ್ವಾಮೀಜಿ ಸಹಿಸುತ್ತಿರಲಿಲ್ಲ; ಸಿಡಿದೆದ್ದು ನಿಂತು ಸೂಕ್ತ ಉತ್ತರ ನೀಡುತ್ತಿದ್ದರು. ಪಾಶ್ಚಾತ್ಯ ದೇಶಗಳ ದಿಗ್ವಿಜಯದ ನಂತರ ಭಾರತಕ್ಕೆ ಮರಳಿ ಬರುವ ಸಂದರ್ಭದಲ್ಲಿ ಒಬ್ಬ ಕ್ರೈಸ್ತ ಮಿಷನರಿ ಸ್ವಾಮೀಜಿ ಮುಂದೆ ಹಿಂದೂಧರ್ಮವನ್ನು ಅತ್ಯಂತ ಹೀನಾಯವಾಗಿ ನಿಂದಿಸತೊಡಗಿದ. ಮೊದಮೊದಲು ಶಾಂತರಾಗಿದ್ದ ಸ್ವಾಮೀಜಿ, ಕೊನೆಗೆ ಅವನ ಕೊರಳ ಪಟ್ಟಿಯನ್ನು ಬಲವಾಗಿ ಹಿಡಿದು, ''ನೀನು ಇನ್ನೂ ನನ್ನ ಧರ್ಮವನ್ನು ನಿಂದಿಸಿದರೆ ನಿನ್ನನ್ನು ಸಮುದ್ರಕ್ಕೆ ಎಸೆದು ಬಿಡುತ್ತೇನೆ'' ಎಂದರು. ಭಯಭೀತನಾದ ಆ ಪಾದ್ರಿ ಅನಂತರ ಅವರೊಂದಿಗೆ ವಿನೀತನಾಗಿ ವರ್ತಿಸಿದನಂತೆ. ವಿಶಾಲಭಾವವೆಂದರೆ ತನ್ನನ್ನು ತಾನು ಮಾರಿಕೊಂಡ ದಾಸ್ಯಭಾವವಲ್ಲ ಎಂಬುದನ್ನು ಸ್ವಾಮೀಜಿ ಹಲವು ಸಂದರ್ಭಗಳಲ್ಲಿ ತೋರಿಸಿಕೊಡುತ್ತಾರೆ.

### ಸನಾತನ ತತ್ತ್ವಕ್ಕೆ ಹೊಸ ಭಾಷ್ಯ

ಸ್ವಾಮೀಜಿ ಹೊಸ ತತ್ತ್ವವನ್ನು ಬೋಧಿಸಲಿಲ್ಲ; ಹೊಸ ಧರ್ಮ, ವಿಚಾರಗಳನ್ನು ಆರಂಭಿಸಲಿಲ್ಲ. ಸನಾತನ ಧರ್ಮ, ಸಂಸ್ಕೃತಿಯ ಹರಿಕಾರರಾಗಿ, ಅದರ ಶ್ರೇಷ್ಠ ಪ್ರತಿನಿಧಿಯಾಗಿ ಪ್ರಪಂಚವನ್ನು ವ್ಯಾಪಿಸಿ ನಿಂತರು. ಪ್ರಯೋಜನಶೂನ್ಯವಾದ, ಕಾಲ-ದೇಶಬದ್ಧವಾದ ನೀತಿ ನಿಯಮಗಳಿಂದ ಜಡಗಟ್ಟಿದ ಧಾರ್ಮಿಕ ನಡವಳಿಕೆಗಳಿಗೂ, ಸಾರ್ವತ್ರಿಕವೂ ಸಾರ್ವಕಾಲಿಕವೂ ಆದ ಸನಾತನ ತತ್ತ್ವಗಳಿಗೂ ಇರುವ ವ್ಯತ್ಯಾಸವನ್ನು ಸ್ಪಷ್ಟವಾದ ಮಾತುಗಳಲ್ಲಿ ತಿಳಿಯಪಡಿಸಿ, ನಿಜವಾದ ಆಧ್ಯಾತ್ಮಿಕತೆಯ, ನಿಜವಾದ ಧರ್ಮದ ತಿರುಳನ್ನು ಹೊಸ ಬಗೆಯಲ್ಲಿ ಪ್ರಸ್ತುತಪಡಿಸಿದುದೇ ಸ್ವಾಮೀಜಿ ಜಗತ್ತಿಗೆ ನೀಡಿದ ಅತ್ಯಮೂಲ್ಯ ಕೊಡುಗೆ. 'ಸ್ವಾಮೀಜಿ ಜಗತ್ತಿಗೆ ಏನೇನನ್ನು ನೀಡಿದರು?' ಎಂದು ಕೇಳುವುದಕ್ಕೆ ಬದಲಾಗಿ, 'ಅವರು ಜಗತ್ತಿಗೆ ನೀಡದೆ ಉಳಿದದ್ದೇನು?' ಎಂದು ಕೇಳಬೇಕು. ಅವರ ಅನುಕಂಪೆಯ ವಿಶಾಲ ಹೃದಯ ಸಮಸ್ತ ಮಾನವಕೋಟಿಯನ್ನಷ್ಟೇ ಅಲ್ಲ ; ನಮ್ಮ ಊಹೆಯ ಪರಿಧಿಯನ್ನೂ ಮೀರಿ ಇನ್ನೂ ಎಷ್ಟೋ ದೂರ ವ್ಯಾಪಿಸಿತ್ತು. ''ಇನ್ನೊಬ್ಬ ವಿವೇಕಾನಂದ ಇದ್ದಿದ್ದರೆ ಈ ವಿವೇಕಾನಂದನನ್ನು ಅರ್ಥಮಾಡಿಕೊಳ್ಳುತ್ತಿದ್ದ'' ಎಂದಿದ್ದರು ಸ್ವಾಮೀಜಿ. ಈ ಮಾತು ಅರ್ಥಗರ್ಭಿತವಾಗಿದೆ! *